ವಿಷಯ : 1996-97ರಲ್ಲಿ ಒಂದನೇ ವರ್ಷದ ಪದವಿ ಪೂರ್ವ ತರಗತಿಗಳಿಗೆ ಪಬ್ಲಿಕ ಪರೀಕ್ಷೆ.

1300 (1749)-ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಒಂದನೇ ಪದವಿ ಪೂರ್ವ ತರಗತಿಯಲ್ಲಿ 1996-97ರಲ್ಲಿ ಎಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಆ) ಈ ಪರೀಕ್ಷೆಗಳು ಆಯಾ ಕಾಲೇಜುಗಳಲ್ಲಿಯೇ ನಡೆಯುತ್ತಿರುವುದು ನಿಜವಲ್ಲವೇ

ಇ) ಈ ಪರೀಕ್ಷೆಗಳನ್ನು ಪಬ್ಲಿಕ್ ಪರೀಕ್ಷೆಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು.)

ಅ) 2,10,000 ವಿದ್ಯಾರ್ಥಿಗಳು

ಆ) ಹೌದು

ಇ) ಇಲ್ಲ

ವಿಷಯ : 1995-96ನೇ ಸಾಲಿನಲ್ಲಿ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ

1302 (1754)-ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1995-96ನೇ ಸಾಲಿನಲ್ಲಿ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣದಲ್ಲಿ (ಎಂ.ಡಿ ಎಂ.ಎಸ್, ಡಿಪ್ಲೊಮೋ) ಯಾವಯಾವ ಕಾಲೇಜಿನಲ್ಲಿ ಯಾವ ಯಾವ ಕೋರ್ಸ್ (ವಿಭಾಗಕ್ಕೆ) ಎಷ್ಟೆಷ್ಟು ನೀಡಲಾಗಿದೆ.

ಆ) ಎಂ.ಸಿ.ಐ.ನಿಂದ ಎಷ್ಟು ಮಾನ್ಯತೆ (ರೆಕಗ್ನಿಷನ್)ಆಗಿದೆ ?

ಇ) ಹೆಚ್ಚುವರಿಯಾಗಿ ನೀಡಿದ ಪ್ರವೇಶ ಎಷ್ಟು ?

ಈ) ಅನಧಿಕೃತ ಪ್ರವೇಶಗಳ ಬಗ್ಗೆ ಎಂ.ಸಿ.ಐ ಏನು ಆದೇಶ ಕಳುಹಿಸಿದೆ. ಯಾವ ಯಾವ ಕಾಲೇಜಿಗೆ ಕಳುಹಿಸಲಾಗಿದೆ ?